ಸುರು ಸುರುವಿಗೆ ಭಾಷೆ ತೊಡಕಾಗಿ ಕಂಡದ್ದು ಹೌದು. ಸುತ್ತಲಿನವರೆದುರಿಗೆ ತಾನು ನಗೆಪಾಟಲಿಗೆ ಈಡಾಗುತ್ತೇನೋ ಎಂದು ಹೆದರಿದ್ದ. ದಿನ ಕಳೆದಂತೆ ತಿಳಿಯಿತು. ದೇಶದ ಯಾವು ಯಾವುದೋ ಮೂಲೆಗಳಿಂದ ಬಂದ ತನ್ನಷ್ಟೇ ಅಥವಾ ತನಗಿಂತ ಹೆಚ್ಚಿನ ದುರದೃಷ್ಟವಂತರಾದ ಅವರೆಲ್ಲರಿಗೂ ತನ್ನ ಹಾಗೆಯೇ ಸಮಸ್ಯೆಗಳೂ ಇವೆ ಎಂದು ತಿಳಿದಾಗ ತಾನೇ ವಾಸಿ ಎನಿಸಿತ್ತು. ಅದರಲ್ಲೂ ಕೆಲವರ ಸಮಸ್ಯೆಗಳನ್ನು ಹತ್ತಿರದಿಂದ ಅರಿತಾಗಲಂತೂ ಇವನಿಗೆ ದಿಗಿಲೇ ಆಗಿತ್ತು. ಹೀಗೂ ಇರಲು ಸಾಧ್ಯವೇ ಅನ್ನಿಸಿತ್ತು. ಅವೆಲ್ಲವುಗಳೆದುರಿಗೆ ತನ್ನದು ಏನೂ ಅಲ್ಲ ಎನಿಸಿ ಭಾಷೆಯ ಸಮಸ್ಯೆ, ಸಂಪಾದನೆಯ ಸಮಸ್ಯೆ ಎಲ್ಲ ಗೌಣ ಎನ್ನಿಸಿತ್ತು.

ಯಾವುದೋ ಕೊಳಚೆಯಲ್ಲಿನ ಜೋಪಡಿಯೊಂದರ ಹರಕು ತಡಿಕೆ ಮತ್ತು ತೂತುಗಳ ಮಾಡಿನ ಕೋಣೆಯಲ್ಲಿ ವಾಸ. ಶಾಲೆ ಮುಗಿಸಿ ದಾರಿಯ ಮೇಲೆ ಸಿಗುವ ಗಾಡಿಯಲ್ಲಿನ ತಿಂಡಿಯೇ ರಾತ್ರಿಯ ಊಟ. ಅದನ್ನೊಂದಿಷ್ಟು ಮುಕ್ಕಿ ತನ್ನ ಕೋಣೆಯನ್ನು ಸೇರಿಕೊಳ್ಳುವ ಹೊತ್ತಿಗೆ ಪಕ್ಕದ ಕೋಣೆಯಲ್ಲಿ ಜೋಪಡಿಯ ಯಜಮಾನಿತಿಯ ಜೊತೆ ಕಂಠಮಟ್ಟ ಕುಡಿದು ಬಂದ ಗಂಡನ ಜಗಳದ ಧ್ವನಿ ತಾರಕಕ್ಕೇರಿರುತ್ತದೆ. ಯಾರೊಬ್ಬರಿಗೋ ಸುಸ್ತಾಗಿ ಗಲಾಟೆ ಮುಗಿಯುತ್ತ ಬಂದಂತೆ ಬೆಳಿಗ್ಗಿನ ಕೆಲಸದ ತುರ್ತು ಬೇಗ ನಿದ್ದೆ ಮಾಡಲು ಆತುರಪಡಿಸುತ್ತಿದ್ದರೆ ಮೈಮೇಲೇ ಹತ್ತಲು ಬರುತ್ತಿದ್ದ ಬೆಕ್ಕಿನ ಗಾತ್ರದ ಹೆಗ್ಗಣಗಳು. ಅವುಗಳಿಗೆ ಹೆದರುವ ಸ್ಥಿತಿಯನ್ನು ಎಂದೋ ದಾಟಿದ್ದ ಅವನು ಹರಕಲು ಹೊದಿಕೆಯನ್ನೇ ಬಿಗಿಯಾಗಿ ಸುತ್ತಿಕೊಳ್ಳುತ್ತ ಅವುಗಳ ಪರಚುವಿಕೆಯಿಂದ ತಪ್ಪಿಸಿಕೊಳ್ಳುತ್ತಿದ್ದ.

ಬೆಳಿಗ್ಗೆ ಬೇಗ ಏಳಬೇಕು. ತುಸು ತಡವಾದರೂ ಆ ಸಾಲಿನ ಹತ್ತಿಪ್ಪತ್ತು ಜೋಪಡಿಗಳಿಗಿರುವ ಒಂದೇ ಒಂದು ಪಾಯಿಖಾನೆಗಾಗಿ ನಿಲ್ಲುವ ಕ್ಯೂನಲ್ಲಿಯೇ ಗಂಟೆಗಟ್ಟಲೆ ಕಳೆಯಬೇಕು. ಆಮೇಲೆ ಸ್ನಾನ ಮಾಡಲು ಸಿಗುವ ಬಕೆಟು ನೀರಿಗೂ ತತ್ವಾರ. ಹಾಗಾಗಿ ಈಗ ಕಷ್ಟಪಟ್ಟಾದರೂ ನಿದ್ದೆ ಮಾಡಬೇಕು. ಆ ನಿದ್ದೆ ಬೆಳಿಗ್ಗೆ ಏಳಬೇಕಾದ ಅಷ್ಟು ಹೊತ್ತಿನೊಳಗೇ ಮುಗಿಯಬೇಕು ಸಹ.

ಅದೆಲ್ಲವನ್ನೂ ಮುಗಿಸಿ ಬೆಳಿಗ್ಗೆ ಏಳೋ ಎಂಟೋ ಗಂಟೆಗೆ ಒಮ್ಮೆ ಜೋಪಡಿಯಿಂದ ಹೊರ ಬಂದರೆ ಅಂದಿನ ತುತ್ತಿನ ಚೀಲವನ್ನು ತುಂಬಿಸುವ ಸಲುವಾಗಿನ ಹೋರಾಟ ಪ್ರಾರಂಭ. ಕಾಯಂ ಕೆಲಸ ಹುಡುಕುವ ಪ್ರಯತ್ನ ನಡೆದೇ ಇತ್ತು. ಅಲ್ಲಿಯ ವರೆಗೆ ಕೈಗೆ ಸಿಕ್ಕಿದ ಕೆಲಸ. ಕೂಲಿಯಾದರೆ ಕೂಲಿ. ಅಂಗಡಿಯಲ್ಲಿ ಪೊಟ್ಟಣ ಕಟ್ಟಿ ಕೊಡುವುದಾದರೂ ಸರಿ. ತರಕಾರಿ ಮುಂತಾದುವುಗಳನ್ನು ಮಾರಾಟ ಮಾಡುತ್ತಿದ್ದ ಅದೇ ಜೋಪಡಿಗಳಲ್ಲಿನ ಕೆಲವರಿಗೆ ಅವರ ತಳ್ಳು ಗಾಡಿಗಳನ್ನು ದೂಡಿ ಕೊಡುತ್ತ ಅವರು ಊಟ ತಿಂಡಿಗೆಂದು ವಿರಾಮ ತೆಗೆದುಕೊಳ್ಳುತ್ತಿದ್ದಾಗ ವ್ಯಾಪಾರವನ್ನೂ ಮಾಡಿಕೊಡುತ್ತಿದ್ದ. ಅದೂ ಅಲ್ಲದಿದ್ದರೆ ಗೋಡೌನುಗಳಲ್ಲಿ ಮೂಟೆ ಹೊರುವುದು. ಹಣ ಸಂಪಾದನೆಯಾಗುವ ಯಾವ ಕೆಲಸವನ್ನೂ ಬಿಡುತ್ತಿರಲಿಲ್ಲ. ಅಲ್ಲ, ಬಿಡುವ ಹಾಗಿರಲಿಲ್ಲ. ದಿನದ ಸಂಪಾದನೆ ಇಲ್ಲವೆಂದರೆ ಆ ದಿನದ ಊಟಕ್ಕೇ ತತ್ವಾರ. ಅಂತಹ ಪರಿಸ್ಥಿತಿಯಲ್ಲಿ ಇಂತಹ ಕೆಲಸವನ್ನು ಮಾತ್ರ ಮಾಡುತ್ತೇನೆ ಎನ್ನುವ ಸ್ವಾತಂತ್ರ್ಯ ಇದೆಯೇ?

ಸಂಜೆ ಐದಕ್ಕೆ ಕೆಲಸವನ್ನೆಲ್ಲ ಮುಗಿಸಿ ಜೋಪಡಿಗೆ ಹಿಂದಿರುಗಿ ಬೆಳಿಗ್ಗೆ ಸ್ನಾನಕ್ಕೆಂದು ತಂದಿದ್ದ ನೀರಿನಲ್ಲಿಯೇ ಉಳಿಸಿ ತಂಬಿಗೆಯಲ್ಲಿ ತುಂಬಿಸಿಟ್ಟಿದ್ದ ನೀರಿನಲ್ಲಿ ಕೈ ಕಾಲು ಮುಖ ತೊಳೆದುಕೊಂಡು ದಿನವಿಡೀ ಹಾಕಿಕೊಂಡಿದ್ದ, ಅಲ್ಲಲ್ಲಿ ಹರಿದು ಹೋದ ಆಗಲೇ ಬೆವರಿನ ಮುದ್ದೆಯೂ ಆಗಿರುತ್ತಿದ್ದ ಅಂಗಿ ಚಡ್ಡಿಗಳನ್ನು ಕಳಚಿ ನಿನ್ನೆ ರಾತ್ರಿ ಕಾಲೇಜಿನಿಂದ ಬಂದು ಜಾಗ್ರತೆಯಿಂದ ಮಡಚಿ ಇಟ್ಟಿದ್ದ ಆ ಒಂದೇ ಜೊತೆ ಪ್ಯಾಂಟು ಮತ್ತು ಅಂಗಿಯನ್ನು ತೊಟ್ಟುಕೊಳ್ಳುವುದು. ಮತ್ತೆ ಮೈಲು ದೂರದ